ಗೊತ್ತಿರುವುದು. ಹಾಗಿದ್ದೂ ಮುನಿಭೈರಪ್ಪ ಮತ್ತು ಪರಾಸಮಣಿಯ ನಡುವೆ ಉಳಿದೇ ಹೋದ ಮೌನದ ಒಂದು ತಂತು ಯಾವುದು? ಯಶಸ್ಸಿಗೂ, ಬದುಕಿನ ಹೋರಾಟಕ್ಕೂ, ಸಿದ್ಧಿಗೂ ಅದಕ್ಕೂ ಏನಿದೆ ನಂಟು? ಈ ಪಾರಸಮಣಿಯ ಕತೆಯೊಂದಿಗೆ ಎಡೂರು ಮಂಗಲದ ಸರ್ಕಾರಿ ಪದವಿಪೂರ್ವ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕಿ ಚಿತ್ರಾಳ ಕತೆಗೆ ಕೂಡ ಸಮಾನವಾದದ್ದು ಏನೋ ತಳುಕು ಹಾಕಿಕೊಂಡಂತಿದೆಯಲ್ಲವೆ?

ಬಿಳಿಗಿರಿಯವರು ಗಾಂಧಿವಾದಿ. ಗಾಂಧಿ ಆಶ್ರಮದಲ್ಲಿ ವರ್ಷಕಾಲ ನೆಲೆನಿಂತವರು. ಆದರೆ ಆಶ್ರಮದಲ್ಲಿ ಗಾಂಧಿ ಸ್ವತಃ ನೂತ ನೂಲಿನ ಹಣದಲ್ಲಿ ಎರಡು ಆಣೆಯನ್ನು ಕಸ್ತೂರ ಬಾ ಅಡುಗೆ ಮನೆಯ ಉಪ್ಪಿಗಾಗಿ ಬಳಸಿಕೊಂಡಾಗ ಗಾಂಧಿ ಅದು ಆಶ್ರಮದ ಹಣ ಎನ್ನುತ್ತಾರೆ. ಒಂದು ವಾರ ಕಾಲ ತಮ್ಮ ಆಹಾರಕ್ರಮ ಬದಲಿಸಿ ತಮ್ಮನ್ನು ತಾವು ಶಿಕ್ಷಿಸಿಕೊಳ್ಳುತ್ತಾರೆ. ಇದನ್ನು ಕಂಡ ಬಿಳಿಗಿರಿಯವರಿಗೆ ಗಾಂಧಿಯವರ ಸನಿಹಕ್ಕೆ ಹೋಗಿ ಮಾತನಾಡಿಸುವ ಆಸೆ ಇಂಗಿ ಹೋಗಿ ಅದಕ್ಕೆ ಬೇಕಾದ ಧೈರ್ಯವೇ ಹೊರಟು ಹೋಗುತ್ತದೆ. ನಮಗೆಲ್ಲ ಗಾಂಧಿ ಗೊತ್ತು. ಅವರ ತತ್ತ್ವಗಳು ಸ್ಥೂಲವಾಗಿ ಗೊತ್ತು. ಸುಳ್ಳು ಹೇಳದಿರಲು, ಇನ್ನೊಬ್ಬರ ಸೊತ್ತಿಗೆ ಆಸೆಪಡದಿರಲು, ಹಿಂಸೆ ಮಾಡದಿರಲು ನಮಗೆ ಇಷ್ಟ. ನಾವು ನಿಜಕ್ಕೂ ಹಾಗೆಯೇ ಬದುಕುತ್ತಿದ್ದೇವೆ ಎಂದು ನಂಬುತ್ತೇವೆ ಕೂಡ. ಆದರೆ ವಿದೇಶದಲ್ಲಿ ಕಲಿಯಲು ಸರ್ಕಾರಿ ವಿದ್ಯಾರ್ಥಿವೇತನ ಮಂಜೂರಾದಾಗ ತಮ್ಮ ಮಗ ಹರಿಲಾಲ ಅದನ್ನು ಬಳಸಿಕೊಳ್ಳುವುದು ಸ್ವಜನಪಕ್ಷಪಾತವಾಗುತ್ತದೆ ಎನ್ನುವ ಗಾಂಧಿಯವರ ವಾದ ನಮಗೆ ವಿಪರೀತದ ಅತಿರೇಕ ಎನಿಸುತ್ತದೆ. ಗಾಂಧಿ ಒಬ್ಬ ಶೋಮ್ಯಾನ್ ಇರಬಹುದೆ, ಯಾರನ್ನೋ ಮೆಚ್ಚಿಸಲು ಈ ರೀತಿ ಕಡುನಿಷ್ಠೆಯ ಪ್ರದರ್ಶನ ಮಾಡುತ್ತಿದ್ದಿರಬಹುದೆ ಎಂದೆಲ್ಲ ಅನಿಸುತ್ತದೆ. ವಿದ್ಯಾರ್ಥಿವೇತನ ಮಂಜೂರು ಮಾಡಿದ್ದು ನೆಹರೂ ಸರಕಾರ ಅಲ್ಲ, ಬ್ರಿಟಿಷ್ ಸರಕಾರ. ಆ ಮಾತು ಬೇರೆ. ಸತ್ಯ, ಅಹಿಂಸೆ, ಅಸಂಗ್ರಹ ಯಾವುದೂ ಅಂದುಕೊಂಡಷ್ಟು ಸರಳವಲ್ಲ, ಸುಲಭವಲ್ಲ ಎನಿಸಿದಾಗ ನಮ್ಮ ಗಾಂಧಿ ಕೇವಲ ನಮ್ಮ ಗಾಂಧಿಯಷ್ಟೇ ಆಗಿ ಉಳಿಯಬೇಕಾಗುತ್ತದೆ. ಅವನು ನಿಜದ ಗಾಂಧಿಯಲ್ಲ, ಛದ್ಮವೇಷದ ಗಾಂಧಿ.

ಬಹುಮಾನವೇನೂ ಬೇಕಾಗಿಲ್ಲ, ನಾನಿದನ್ನು ಬಹುಮಾನದ ಆಸೆಗೆ ಮಾಡಿಸುತ್ತಿಲ್ಲ ಎಂದ ಅಂಬೇಡ್ಕರ್ ವೇಷಧಾರಿಯ ಪೋಷಕನಿಗೆ ಮನೆಯಲ್ಲೇ ಬೆಂಬಲ ಸಿಗುವುದಿಲ್ಲ. ಭಗವದ್ಗೀತೆಯ "ಫಲಾಪೇಕ್ಷೆಯಿಲ್ಲದೇ ಕರ್ಮ ಮಾಡು, ಯಶಸ್ಸುಅಪಯಶಸ್ಸನ್ನು ನನಗೆ ಬಿಟ್ಟುಕೊಡು" ಎಂದ ಕೃಷ್ಣನ ಕತೆ ಕೂಡ ಅಷ್ಟೇ. ನಮ್ಮ ಕೃಷ್ಣ, ನಮ್ಮ ಗೀತೆ ಛದ್ಮವೇಷದ್ದು, ಯಾವುದೋ ಯಶಸ್ಸಿಗೆ, ಅನುಕೂಲಕ್ಕೆ ಒದಗುವಂಥಾದ್ದು. ಇಲ್ಲಿ ಸಿದ್ಧಿ ಎಂದರೆ ಏನು, ಯಾವುದು?

ಸರಿಗೆಯ ಮೇಲೆ ನಡೆವ, ಉರಿವ ಚಕ್ರದಿಂದ ನುಸುಳುವ, ಹಾವುಚೇಳುಗಳು ಮೈಮೇಲೆ ಹರಿದಾಡಿದರೂ ವಿಚಲಿತರಾಗದಂತಿರುವ ಸವಾಲಿನ ದೊಂಬರಾಟ ಈ ಬದುಕು ಎನ್ನುತ್ತಾರೆ ಹನೂರರು. ಈ ಪರೀಕ್ಷೆಯನ್ನು, ಅದು ಯಾಕೆಂದೇ ಸ್ಪಷ್ಟವಿಲ್ಲದಿದ್ದರೂ ನಾವು ಹಾಯಬೇಕಿದೆ. ಹಾಯುವುದರಿಂದ ಚಂದ್ರ ಕೈಗೆಟುಕುವನೆ, ಸಿದ್ಧಿಸಿದ್ದರ ಗುಂಗು ಬಿಟ್ಟು ಇನ್ನಾವುದರದ್ದೋ ಗುಂಗು ಹತ್ತಿಸುವ ಚಾಳಿಯಿಂದ ಮುಕ್ತರನ್ನಾಗಿಸುವ ಅಂತಿಮದ ಸಿದ್ಧಿ ಸಿಗುವುದೆ, ಕಾದಂಬರಿ ಅದನ್ನು ಉತ್ತರಿಸುವ ಗೋಜಿಗೆ ಹೋಗುವುದಿಲ್ಲ. ಯಾಕೆಂದರೆ, ಇಲ್ಲಿ ಪ್ರಶ್ನೆಗಳಿವೆ, ಕ್ರಿಸ್ತ ಹೊತ್ತ ಶಿಲುಬೆಯಂತೆ. ಮತ್ತು, ಅವರವರ ಶಿಲುಬೆಯನ್ನು ಅವರವರೇ ಹೊರಬೇಕಾಗಿದೆ, ಅಂಥ ಸಿದ್ಧಿಗಾಗಿ.